# ಎದೆಯು ಮರಳಿ ತೊಳಲುತಿದೆ...

ಪ್ರೀತಿಯಿಲ್ಲದ ನೇಹಾ,

ನೀನು ಇರಲೇ ಇಲ್ಲ. ಇನ್ನು ನಿನ್ನನ್ನು ನಾನು ಕಳೆದುಕೊಂಡದ್ದಾದರೂ ಹೇಗೆ? ನಿನ್ನ ಬಗೆಗಿನ ನನ್ನ ಕನಸುಗಳೆಲ್ಲ 'ಹಾಲುಗಲ್ಲದ ಮಗು ರಾತ್ರಿ ಮಲಗುವ ಮುನ್ನ ಕಂಡ ಚಂದ್ರಬಿಂಬವ ನೆನೆದುಕೊಂಡು, ನಿದ್ದೆಯಲ್ಲಿ ಅದನ್ನೇ ತನ್ನ ಕೈಯಲ್ಲಿ ಹಿಡಿದ ಕನಸು ಕಂಡಂತೆ' ಕಂಡ ಬಾಲಿಶ, ಮುಗ್ಧ ಕನಸುಗಳೇ ಹೊರತು, ಅವಕ್ಕೆಲ್ಲ ಇನಿತಾದರೂ ವಾಸ್ತವದ ಬೇರುಗಳಿರಲಿಲ್ಲ...

ಇಷ್ಟೆಲ್ಲ ಆದರೂ, ಇಷ್ಟೆಲ್ಲ ಮಾತು, ಸಾಂತ್ವನ, ಹೋಲಿಕೆ, ಪ್ರತಿಮೆಗಳ ಮೂಲಕ ನನ್ನೆದೆಯನ್ನು ಸಂತೈಸಲೆತ್ನಿಸಿದರೂ ಅದು ಹೀಗೆ ಕೆಲವೊಮ್ಮೆ ಮಾಗಿಯ ಚಳಿ-ಚಳಿಯ ರಾತ್ರಿಗಳಲ್ಲಿ ನಾನು ಘಟ್ಟನೆದ್ದು ಕೂರುವಂತೆ ಮಾಡುತ್ತದೆ. ಮತ್ತೆ ಮರಳಿ ಅದೇ ವಿಷಾದಕ್ಕೆ ಮರಳುವ ಯತ್ನ ಮಾಡುತ್ತದೆ, ತೊಳಲುತ್ತದೆ, ಸಿಗಲಾರದುದನ್ನೇ ಹುಡುಕುತ್ತ, ಹೊಸದಾಗಿ ಚಿಗುರಿದ ಬಳ್ಳಿಯ ಕುಡಿಯು ತನ್ನಾಸರೆಗಾಗಿ ಏನನ್ನಾದರೂ ಹುಡುಕಾಡುವಂತೆ, ಸಣ್ಣ ಕಡ್ಡಿಯನ್ನು ಕಂಡರೂ ಅದಕ್ಕೇ ಆತುಕೊಳ್ಳುವಂತೆ ನನ್ನೆದೆಯೂ ಕಿಂಚಿತ್ ಆಸರೆಗಾಗಿ ಅರಸಿ ನರಳುತ್ತಿದೆ, ನನ್ನನ್ನು ಅಧೀರನನ್ನಾಗಿ ಮಾಡುತ್ತಿದೆ...

**ಎದೆಯು ಮರಳಿ ತೊಳಲುತಿದೆ, ದೊರೆಯದುದನೆ ಹುಡುಕುತಿದೆ**
**ಅತ್ತ ಇತ್ತ ದಿಕ್ಕುಗೆಟ್ಟು ಬಳ್ಳಿ ಬಾಳು ಚಾಚುತಿದೆ ತನ್ನ ಕುಡಿಯನು**

ಅಮ್ಮ ಹೇಳುತ್ತಾಳೆ, 'ಮದುವೆಯಾಗಿಬಿಡು ಮಗನೇ'. ಹ್ಹ! ತಾನು ಬಯಸಿದ ಆಸರೆ ಸಿಗಲಾರದುದಕ್ಕೆ, ವೃಥಾ ನಿರೀಕ್ಷೆಯ ಕಾವಿನ ಬೇಸರಕ್ಕೆ ನನ್ನೆದೆ ಅದಕ್ಕೂ ಕೆಲವೊಮ್ಮೆ ಅಸ್ತು ಎಂದುಬಿಡುತ್ತದೆ! ಆದರೆ ತನಗೇನು ಬೇಕು ಅಂತಾ ಅದಕ್ಕೇ ಗೊತ್ತಿಲ್ಲ. ಹೀಗಿರುವಾಗ ನನ್ನೆದೆಯ ಹುಚ್ಚುಮಾತುಗಳನ್ನು ಕೇಳಿಕೊಂಡು ಮೋಸ ಹೋಗಿಬಿಡಲೇ? ದುಡುಕಿ ಮೀರಿಬಿಡಲೇ ನನ್ನ ಅರಿವಿನ ಗಡಿಯ?

ನಾನು ನನ್ನೆದೆಯ ಮಾತು ಕೇಳಿದರೆ, ಕೇಳಿ ದುಡುಕಿದರೆ ಮುಂದಕ್ಕೆ ದಗ್ದಗೊಳ್ಳುವುದು ಒಂದಲ್ಲ, ಎರಡು ಹೃದಯಗಳು! ಅದು ನನಗಿಷ್ಟವಿಲ್ಲ. ಅದಕ್ಕಾಗೇ ಈಗ ಎಲ್ಲವನ್ನೂ ಕಟ್ಟಿಟ್ಟು, ನನ್ನೆದೆಯ ಮೇಲೆ ಕಲ್ಲು ಹೇರಿ ಈ ವಿಷಾದಯೋಗವನ್ನು ಮೌನವಾಗಿ ಅನುಭವಿಸುತ್ತಿದ್ದೇನೆ, ಆದರೂ ನನ್ನೆದೆಯದ್ದು, ಅದರೊಳಗೆ ಮಿಡಿವ ಹೃದಯದ್ದು ಒಂದೇ ಹಠ, ಏಕವಾದ ವೃಥಾಲಾಪ...

**ಸಿಗಲಾರದ ಆಸರಕೆ, ಕಾದ ಕಾವ ಬೇಸರಕೆ**
**ಮಿಡುಕಿ ದುಡುಕಲೆಳಸುತಿದೆ ತನ್ನ ಗಡಿಯನು**

ಈಗ ನನ್ನೆದೆ ಬಾಲಿಶವಾಗಿ ತನಗಲ್ಲದುದನ್ನೆಲ್ಲ ಬಾಚಿಕೊಳ್ಳಹೊರಡುತ್ತಿದೆ, ಬೇರೆಯವರಿಗೆಲ್ಲ ಸುಲಭವಾಗಿ ಸಿಕ್ಕಿದ್ದು ತನಗೆ ಸಿಗಲಾರದೇ ಎಂಬ ಹುಂಬ ಲೆಕ್ಕಾಚಾರಕ್ಕೆ ಬಿದ್ದು ಎಲ್ಲೆಡೆ ತನ್ನ ಪುಪ್ಪುಸದ ಗೂಡಿನೊಳಗಿನ ಸಣ್ಣ ಹೃದಯದ ಗಿಂಡಿ ಹಿಡಿದು ಪಾತ್ರಾಪಾತ್ರದ ಪರಿವೆಯಿಲ್ಲದಂತೆ ತಿರಿಯುತ್ತಿದೆ, ಬೇಡುತ್ತಿದೆ, ಮತ್ತು ತನ್ನ ಈ ದುಃಸ್ಥಿತಿಗೆ ತಾನೇ ನಾಚಿಕೊಳ್ಳುತ್ತಿದೆ...

ತಿರಿದಾದರೂ ಸರಿ, ಹೊಸತು ಪ್ರೀತಿಯ ಕಂಡುಕೊಳ್ಳಬಲ್ಲೆ; ನನ್ನೆದೆಯಲ್ಲಿ ಹೊಸ ಪ್ರೀತಿಯ ಚಿಗುರ ಮೂಡಿಸಿಕೊಳ್ಳಬಲ್ಲೆ, ಏನಾದರೂ ಮಾಡಿ, ಇದನ್ನೆಲ್ಲ ಈಸಿ ದಡವ ಮುಟ್ಟಬಲ್ಲೆನೆಂಬ ಧೈರ್ಯವಿದ್ದರೂ ಕೆಲವೊಮ್ಮೆ ತೋಳುಗಳು ಸೋಲುತ್ತವೆ, ಈಗಾಗಲೇ ಉಂಡಿರುವ ಸೋಲಿನ ನೆನಪಾಗಿ, ಹೊಸ ಗಮ್ಯದೆಡೆಗೆ ಇಟ್ಟ ಹೊಸ ಹೆಜ್ಜೆಗಳು, ಹೊಸ್ತಿಲಿನಲ್ಲೇ ತಡವರಿಸುತ್ತವೆ, ಮತ್ತೊಮ್ಮೆ ಹೊಸದಾಗಿ ಎಡವಿ ಬಿದ್ದೇನೇ ನಾನು? ಎಡವಿ ಬಿದ್ದರೇನು ಗತಿ?

**ಅದಕು ಇದಕು ಅಂಗಲಾಚಿ ತನ್ನೊಲವಿಗೆ ತಾನೇ ನಾಚಿ**
**ದಡವ ಮುಟ್ಟಿ ಮುಟ್ಟದೊಲು ಹಿಂದೆಗೆಯುವ ವೀಚಿವೀಚಿ ಮುರುಟುತಲಿವೆ ಮನದಲಿ**

ನನ್ನೊಂದಿಗೆ ನಿನ್ನ ಮೋಹಕ ಹೆಸರಿನಲ್ಲಿ ಬಂದು ಕಣ್ಣಾಮುಚ್ಚಾಲೆಯಾಡಿದ ಪ್ರೀತಿ, ಮತ್ತ್ಯಾವುದೋ ಹೊಸ ರೂಪಿನಲ್ಲಿ ದೂರದಲ್ಲೆಲ್ಲೋ ನಿಂತು ಕಾಯುತ್ತಿದೆ, ಕರೆಯುತ್ತಿದೆ ನನ್ನನ್ನು, ನನ್ನಂತಹ ಎಲ್ಲರನ್ನು, ನಿಜ; ಆದರೆ ಯಾವ ಕರೆ ಯಾರಿಗೆ ಎಂದು

ತಿಳಿಯದೇ ಎತ್ತೆಡೆಗೋ ಸುಮ್ಮನೇ ನುಗ್ಗಿಬಿಡಲೇ? ಹೊಸ ನಂಬರಿನಿಂದ ಕರೆ ಬಂತೆಂದು ಮೊಬೈಲ್ ಕಿವಿಗಿಟ್ಟುಕೊಂಡರೆ, ನನ್ನ ಧ್ವನಿ ಕೇಳಿಯೇ ಅತ್ತ ಕಡೆಯಿಂದ ಹುಡುಗಿಯೊಬ್ಬಳು ತಟ್ಟನೆ 'ಸಾರಿ, ರಾಂಗ್ ನಂಬರ್!' ಅಂದು ಫೋನ್ ಇಟ್ಟುಬಿಟ್ಟಂತಾಗುವುದಿಲ್ಲವೇ?

ಈಗ ಇಷ್ಟೆಲ್ಲ ನಾನಂದುಕೊಂಡರೂ ನನ್ನೆದೆ ನನ್ನ ಮಾತು ಕೇಳುತ್ತಿಲ್ಲ. ಈ ಎದೆಯೊಳಗಿನ ವಿಷಾದದ ಕೀವು ತುಂಬಿಕೊಂಡ ಮುಷ್ಟಿಗಾತ್ರದ ಹೃದಯಕ್ಕೀಗ ಸಾವಿರ ಸಾವಿರ ಕೈಗೂಡದ ಕನಸುಗಳ ಹೆಣಗಳ ತೂಕ. ಆ ಭಾರವನ್ನು ಭರಿಸಲಾರದೇ ನನ್ನ ಅಳ್ಳೆದೆ ಅದುರುತ್ತಿದೆ, ನಡುಗುತ್ತಿದೆ, ತಾಳಲಾರೆ ಅನ್ನುತ್ತಿದೆ; ನಡೆ, ಹೊಸ ಆಸರೆಯೊಂದನ್ನು ಅರಸು ಅನ್ನುತ್ತಿದೆ; ಮತ್ತು ಹೀಗೆಲ್ಲ ರಾತ್ರೋರಾತ್ರಿ ನನ್ನನ್ನು ಎಬ್ಬಿಸಿ ಕೂರಿಸಿ, ನಿದ್ದೆ ಕೊಡದೇ ಕಾಡಿಸುತ್ತಿದೆ...

**ನೀರದಗಳ ದೂರತೀರ, ಕರೆಯುತಲಿದೆ ಎದೆಯ ನೀರ**
**ಮೀರುತಲಿದೆ ಹೃದಯ ಭಾರ, ತಾಳಲೆಂತು ನಾ?**

ಇನ್ಯಾವ ಬಲ ಈ ಜೀವನಕ್ಕೆ? ಇನ್ಯಾರ ಒಲವು ಈ ಸೋತ ಹೃದಯಕ್ಕೆ? ಆ ಸೋತ ಹೃದಯವನ್ನು ತನ್ನೊಳಗೆ ಬಚ್ಚಿಟ್ಟುಕೊಂಡಿರುವ ಈ ನನ್ನೆದೆಗೆ? ಯಾವಾಗ ಕಂಡೀತು ಹೊಸ ಒಲವಿನ, ಹೊಸ ಆಸರೆಯ ಹೊಳಹು? ಅಲ್ಲಿಯವರೆಗೂ ಈ ಹೃದಯವನ್ನು, ಮನಸನ್ನು ಸಂತೈಸುವುದಾದರೂ ಹೇಗೆ? ಅಲ್ಲೀವರೆಗೂ ಹೊಸ ಒಲವಿನ ಬೆಳಕು ಕಾಣದೇ ತನ್ನನ್ನು ತಾನೇ ಸುಟ್ಟುಕೊಳ್ಳುತ್ತಿರುವ ಈ ಮನಸಿನೊಂದಿಗೆ ಬಾಳುವುದಾದರೂ ಹೇಗೆ?

**ಯಾವ ಬಲವು ಯಾವ ಒಲವು ಕಾಯಬೇಕು ಅದರ ಹೊಳವು**
**ಕಾಣದೆದಳ್ಳಿಸಲು ಮನವು ಬಾಳಲೆಂತು ನಾ**

ಪ್ರೀತಿಯೊಂದನ್ನುಳಿದು ಈ ಜಗತ್ತಿನಲ್ಲಿ ಎಲ್ಲದಕ್ಕೂ ಕೊನೆಯೆಂಬುದಿದೆ ಅಲ್ಲವೇ? ನಲಿವು, ನೋವು, ಹುಟ್ಟು ಸಾವು, ಹಗಲು, ಇರುಳು, ನೀನು, ನಾನು! ಮತ್ತು ನನ್ನ ಈ ವಿಷಾದಯೋಗ ಎಲ್ಲವೂ ಕೊನೆಯಾಗಲೇ ಬೇಕು ಅಲ್ಲವೇ? ಇದೊಂದು ಆಶಾಭಾವವನ್ನು ನನ್ನೊಳಗೆ ಉಳಿಸಿಕೊಂಡು ಆ ಕೊನೆಗೊಸ್ಕರ ಕಾಯುತ್ತಿದ್ದೇನೆ ನಾನು. ಆ ಕೊನೆಯ ಅಂಚಿನಲ್ಲಿ ನಿಂತು, ನನ್ನ ಮನಸಿನೆಲ್ಲ ದ್ವಂದ್ವಗಳನ್ನೆಲ್ಲ, ಪ್ರಶ್ನೆಗಳನ್ನೆಲ್ಲ ಒಂದೇ ನಸುನಗುವಿನಿಂದ ತೊಳೆದು ಹಾಕಿಬಿಡುವ ಆ ಪ್ರೀತಿಯ ನಿನ್ನದಲ್ಲದ ಹೊಚ್ಚ ಹೊಸ ಮುಖಕ್ಕಾಗಿ ಕಾಯುತ್ತಿದ್ದೇನೆ ಹುಡುಗೀ.

ಆದರೂ ನನ್ನೆಲ್ಲ ದೃಢ ನಿರ್ಧಾರಗಳನ್ನೂ, ನಿರೀಕ್ಷೆಗಳನ್ನೂ ನಿರರ್ಥಕಗೊಳಿಸಿಬಿಡುವಂತೆ ಕೆಲವೊಮ್ಮೆ, ಕೆಲವೊಂದು ನೀರವ ರಾತ್ರಿಗಳಲ್ಲಿ...

**ಎದೆಯು ಮರಳಿ ತೊಳಲುತಿದೆ, ದೊರೆಯದುದನೆ ಹುಡುಕುತಿದೆ...**

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್.** ks_shivu@yahoo.com